ಶ್ರೀ ಬಿ. ಜಿ. ಬಣಕಾರ.—ಈಗ ಮಾಡುತ್ತಾ ಇರುವ ಪ್ರಕಾರ, ಅವನಿಂದ ಕೆಲಸವನ್ನು ಮಾಡಿಸುವುದಕ್ಕಾಗುವುದಿಲ್ಲ. ಅವನ ಅಪ್ಪನಿಂದಲೂ ಕೆಲಸ ಮಾಡುವುದಕ್ಕಾಗುವುದಿಲ್ಲ, ಇಂಥವರು ಬೇಕಾದಷ್ಟು ಜನ ಇದ್ದಾರೆ. ಅವರ ಮೇಲೆ ಅಧಿಕಾರಿಗಳು ಸೂಕ್ತ ಕ್ರಮ ತೆಗೆದುಕೊಂಡಿಲ್ಲ. ಇಂಥ ಕಂಟ್ರಾಕ್ಟರುಗಳನ್ನು ರದ್ದುಪಡಿಸಿ, ಅಧಿಕಾರಿಗಳು ಒಂದು ವೇಳೆ ನಿರ್ದಾಕ್ಷಿಣ್ಯವಾಗಿ ಇವರ ಮೇಲೆ ಕ್ರಮ ತೆಗೆದುಕೊಳ್ಳದಿದ್ದರೆ, ಇದನ್ನೆರ್ಲಾ ನೋಡಿಕೊಂಡು ಡಿಪಾರ್ಟ್‌ಮೆಂಟಿನವರಾಗಲಿ ತೀವ್ರ ಕ್ರಮ ತೆಗೆದುಕೊಳ್ಳುತ್ತೀರಾ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಧಾರವಾಡ ಜಿಲ್ಲೆಯಲ್ಲಿ, ಅದರಲ್ಲೂ ಕೂಡ ಈ ಭಾಗದಲ್ಲಿ ಬ್ಲಾಕ್ ಕಂಟ್ರಾಕ್ಟರ್ಸ್ ಇದ್ದಾರೆ ಎಂದು ನನ್ನ ಗಮನಕ್ಕೆ ಬಂದಿದೆ. ಈಗಾಗಲೇ ಕೆಲಸವನ್ನು ಬ್ಲಾಕ್ ಲಿಸ್ಟ್ ಮಾಡಿದ್ದೇನೆ. ಮುಂದೆ ನೋಡಿ ಬರತಕ್ಕ ಬ್ಲಾಕ್ ಕಂಟ್ರಾಕ್ಟರ್ಸ್ ಅನ್ನು ಬ್ಲಾಕ್ ಲಿಸ್ಟ್ ಮಾಡುತ್ತೇನೆ.

ಶ್ರೀ ಎಂ. ಎಂ. ನದಾಫ್.—ಈಗ ಕಂಟ್ರಾಕ್ಟ್ ಕೊಟ್ಟಿರುವದು ಮೊದಲನೆಯ ಕಂಟ್ರಾಕ್ಟರ್ ಮಗನಿಗೆ ಎಂದು ತಮಗೆ ತಿಳಿದು ಬಂದಿದೆಯೇ ?

ಶ್ರಿ ಎಚ್. ಎಂ. ಚೆನ್ನಬಸಪ್ಪ.—ವಿವರಗಳನ್ನು ಹೇಳಬೇಕಾದದು ಅನಗತ್ಯ. ಏನು ಅಚಾತುರ್ಯ ನಡೆಯುತ್ತಿದೆ ಎಂದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ತೀವ್ರವಾಗಿ ಪರಿಶೀಲಿಸಿ ವಿಚಾರಣೆ ನಡೆಸಿ, ತಪ್ಪಿತಸ್ಥರಿಗೆ ಶಿಕ್ಷೆ ಮಾಡಿ ಕೆಲಸ ಮುಂದುವರಿಸುವುದಕ್ಕೆ ವ್ಯವಸ್ಥೆ ಮಾಡುತ್ತೇನೆ. ಇದೇ ಪ್ರಶ್ನೆಯನ್ನು ಪುನಃ ಕೇಳಿದರೆ ಏನು ಹೇಳಲು.

KELAGUR BRIDGE IN MUDIGERE TALUK

270. **Sri G. PUTTASWAMY** (Mudigere).—

Will the Minister for Public Works and Electricity be pleased to state.—

(*a*) whether it has come to the notice of the Government that Kelagur bridge on Kottigere-Kalasa road of Mudigere taluk is in dangerous condition and thereby inconvenience is caused for the movement of people and cattle ;

(*b*) if so, whether the Government have thought of constructing a new bridge by demolising the said bridge ;

(*c*) if so, whether the said work would be taken up during 1972-73 by making provision in the present year's budget ?

Sri H. M. CHANNABASAPPA (Minister for Public Works and Electricity).—

(*a*) Yes. The bridge is not in such a condition which is likely to collapse immediately and there may not be any difficulty for movement of the people.

(*b*) Under the consideration of the Government.

(*c*) No. It will be considered for including the same in 1973-74 Budget. But this is subject to availability of funds.

Sri G. PUTTASWAMY.—You have accepted the dangerous condition of the Kelgur bridge on Kottigere-Kalasa Road. Will you kindly explain the extent of damage caused to this bridge ?

†ಶ್ರೀ ಎಚ್. ಎಂ. ಚನ್ನಬಸಪ್ಪ.—1961ನೇ ಇಸವಿಯಿಂದಲೂ ಈ ಬ್ರಿಡ್ಜ್ ಮೇಲೆ ನೀರು ಓವರ್‌ಫ್ಲೋ ಆಗಿದ್ದು, ಡ್ಯಾಮ್‌ನೊಳಗೆ ಎಂಬ್ಯಾಂಕ್‌ಮೆಂಟ್ ಆರ್ಚ ಡ್ಯಾಮೇಜ್ ಆಗಿದೆ. ಈ ಎರಡನ್ನೂ ರಿಪೇರಿ ಮಾಡಿದ್ದೇವೆ.

ಶ್ರೀ ಬಿ. ಪುಟ್ಟಸ್ವಾಮಿ.—ಇದು ಲಕ್ಷಾಂತರ ಜನ ತಿರುಗಾಡತಕ್ಕ ಸ್ಟೇಟ್ ಫಂಡ್ ರೋಡು, ಮತ್ತು ದೊಡ್ಡ ದೊಡ್ಡ ಭಾರವಾದ ಲಾರಿಗಳು, ಭಾರ ಹೊತ್ತ ಬಸ್ಸುಗಳು ಟ್ರಾಫಿಕ್ ವಿಶೇಷವಾಗಿರುವುದರಿಂದ, ಇದು ಅಪಾಯ ಸ್ಥಿತಿಯಲ್ಲಿರುವುದರಿಂದ, ಜನಗಳು ಭಯ ಪಡುತ್ತಿದ್ದಾರೆ. ತಾವು ಭರವಸಕೊಟ್ಟಿರುವ ರೀತಿಯಲ್ಲಿ ಇದಕ್ಕೆ ಬಜೆಟ್ಟಿನಲ್ಲಿ ಹಣವನ್ನು ಪ್ರೊವೈಡ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಎಚ್.ಎಂ. ಚೆನ್ನಬಸಪ್ಪ.—ತಾವು ಇದು ಮುಖ್ಯವಾದ ರಸ್ತೆ ಎನ್ನತಕ್ಕ ವಿಷಯದಲ್ಲಿ ಭಿನ್ನಾಭಿಪ್ರಾಯವಿಲ್ಲ. ಆದರೆ ತಾವು ಹೇಳಿದ ರೀತಿಯಲ್ಲಿ ಇಲ್ಲಿ ಅಪಾಯ ಏನೂ ಇಲ್ಲ. ಆದರೆ ಅನಾನು-ಕೂಲ ಇದೆ. ಅಪಾಯಕ್ಕೂ ಅನಾನುಕೂಲಕ್ಕೂ ವ್ಯತ್ಯಾಸ ಇದೆ.

ಶ್ರೀ ಬಿ. ಪುಟ್ಟಸ್ವಾಮಿ.—ಈ ಬ್ರಿಡ್ಜ್ ಸೀಳು ಬಿಟ್ಟಿಲ್ಲವೆ ?

ಶ್ರೀ ಎಚ್. ಎಂ. ಚನ್ನಬಸಪ್ಪ.—ಇದನ್ನು ಪರೀಕ್ಷೆಮಾಡಿಸಿದೆ, ನನಗೆ ಬಂದಿರುವ ವರದಿ ಪ್ರಕಾರ ಇದು 12 ಅಡಿ ಅಗಲ ಇರುವುದರಿಂದ, ದೊಡ್ಡ ದೊಡ್ಡ ಬಸ್ಸುಗಳು, ಲಾರಿಗಳು ಹೋಗುವುದಕ್ಕೆ ಅನಾನುಕೂಲ ಇದೆ. ಒಪ್ಪಿಕೊಳ್ಳುತ್ತೇನೆ. ಆದರೆ ಅಪಾಯ ಮಾತ್ರ ಇಲ್ಲ ಎಂದು ಸ್ಪಷ್ಟಪಡಿಸುತ್ತೇನೆ. ಇನ್ನೊಂದು ವಿಷಯ ಏನೆಂದರೆ, ಈಗ ಕುದುರೆ ಮುಖ ಓರ್‌ಗೆ ಈ ರಸ್ತೆ ಸೇರುವುದರಿಂದ ಇದು ಬಹಳ ಪ್ರಮುಖವಾದ ರಸ್ತೆಯಾಗುತ್ತದೆ. ಹೆಚ್ಚಿನ ಭಾರವನ್ನು ಲಾರಿಗಳವರು ಹಾಕಬೇಕಾತ್ತದೆ ಆದ್ದರಿಂದ ಬೇರೆ ಸೇತುವೆಯನ್ನು ಕಟ್ಟಿಸಿಕೊಡಬೇಕು ಎಂದು ಸರ್ಕಾರ ಆಲೋಚನೆ ಮಾಡುತ್ತಿದೆ.

Lift Irrigation Work at Goundahal, Hyati, Lachankere and Hirebaganahal of Koppal Taluk

376. **Sri M. VIRUPAKSHAPPA** (Koppal).—

Will the Minister for Public Works and Electricity be pleased to state :—

the reasons for the inordinate delay in taking up the Lift Irrigation work at Goundahal, Hyati, Lachankere and Hirebaganahal villages of Koppal Taluk for the benefit of re-settlers from Tungabhadra Project ?

Sri H. M. CHANNABASAPPA (Minister for Public Works and Electricity.—

These Lift Irrigation Schemes are on foreshore of Tungabhadra Reservoir and hence were not taken up so far. It is now proposed to take them subject to availability of funds.

ಶ್ರೀ ಎಂ. ವಿರೂಪಾಕ್ಷಪ್ಪ.—ಯಾತದ ಯೋಜನೆಗಳಿಗೆ ತಗಲತಕ್ಕ ಖರ್ಚು ಕೂಡ ತೀರಾ ಕಡಿಮೆ ಎಂದು ಸರ್ಕಾರದ ಗಮನಕ್ಕೆ ಬಂದಿದೆಯೇ ?

† ಶ್ರೀ ಎಚ್. ಎಂ. ಚೆನ್ನಬಸಪ್ಪ.—ತೀರಾ ಕಡಿಮೆ ಅಥವಾ ಹೆಚ್ಚು ಎನ್ನತಕ್ಕದು ಒಂದಕ್ಕೊಂದಕ್ಕೆ ಹೋಲಿಸಿ ನೋಡಿದರೆ ಗೊತ್ತಾಗುತ್ತದೆ. ಕಡಿಮೆ ಅಥವಾ ಹೆಚ್ಚು ಎಂದು ಹೇಳುವುದು ಕಷ್ಟ.

ಶ್ರೀ ಎಂ. ವಿರೂಪಾಕ್ಷಪ್ಪ.—ಬರಗಾಲ ಪರಿಸ್ಥಿತಿಯನ್ನನ್ನು ನರಿತು ಈ ಯೋಜನೆಗಳನ್ನು ತೀವ್ರ ಕೈಗೆಕೊಳ್ಳುವರೇ ?